ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 19-08-2016

ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 20.08.16 –24.08.16 ವರೆಗೆ)

	20.08.16	21.08.16	22.08.16	23.08.16	24.08.16
ಮಳೆ (ಮಿ ಮಿ)	1	2	1	2	1
ಗರಿಷ್ಠ ಉಷ್ಣಾಂಶ(ಡಿ.ಸೆ.)	29	28	28	28	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	20	20	20
ಮೋಡ (ಪ್ರಮಾಣ)	3	7	7	8	8
ಅರ್ದ್ರತೆ ೭.೨೦ ಬೆ (ಶೇ)	90	87	87	87	87
ಅರ್ದ್ರತೆ ೨.೨೦ ಮ (ಶೇ)	71	74	74	73	75
ಗಾಳಿಯ ವೇಗ (ಕಿ.ಮಿ/ಗಂಟೆಗೆ)	13	12	11	12	12
ಗಾಳಿಯ ದಿಕ್ಕು (ಡಿಗ್ರಿ)	270	260	250	260	270

ಮುಂಬರುವ 5 ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ . ದಿನದ ಗರಿಷ್ಠ ಉಷ್ಣಾಂಶ **28.0-29.0°** ಸೆ ಮತ್ತು ಕನಿಷ್ಠ **20.0°** ಸೆ ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **87-90 % %** ಇದ್ದು ಮಧ್ಯಾಹ್ನ **71-75 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **11-13** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ಸಾಮಾನ್ಯ	➢ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯ ಮುನ್ಸೂಚನೆ ಕಡಿಮೆ, ತದನಂತರ ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಆಗಸ್ಟ್ ನಾಲ್ಕನೇ ವಾರದ ವರೆಗೂ ಮಳೆಯ ಕೊರತೆ ಕಂಡುಬರುವ ಸಾದ್ಯತೆ ಇರುವುದರಿಂದ ಮುಂಗಾರು ಬಿತ್ತನೆಯನ್ನು ಇನ್ನು 2 ವಾರಗಳ ಕಾಲ ಮುಂದೂಡುವುದು ಸೂಕ್ತ. ➢ ಕಳೆದ ಎರಡು ವಾರಗಳಿಂದ ಮಳೆಯ ಅಭಾವದಿಂದ ತೀವ್ರ ನೀರಿನ ಕೊರತೆ ಕಂಡುಬಂದಿದ್ದು ಮತ್ತು ಇನ್ನು ಎರಡು ವಾರಗಳಲ್ಲಿ ಮಳೆಯು ಇಳಿಮುಕವಾಗುವ ಸಾಧ್ಯತೆಯಿರುವುದರಿಂದ ಇದಕ್ಕೆ ಪರ್ಯಾಯ ಬೆಳೆಗಳಾದ ಮೇವಿನ ಮುಸುಕಿನ ಜೋಳ, ಅವರೆ, ರಾಗಿ, ಅಲಸಂದೆ ಹಾಗೂ ಕಿರು ಧಾನ್ಯಗಳಾದ ನವಣೆ, ಸಜ್ಜೆ, ಇತ್ಯಾದಿ ಬೆಳೆಗಳನ್ನು ಬೆಳೆಯಬೇಕೆಂದು ಸೂಚಿಸಲಾಗಿದೆ. ➢ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಒಂದು ಬಾರಿ ಕೊಡುವುದು. ➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ಬಾಳೆ ಮತ್ತು ತರಕಾರಿ ಬೆಳೆಗಳಿಗೆ ರಕ್ಷಣೆ ಕ್ರಮಗಳನ್ನು ಅನುಸರಿಸಿ. ➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ತೋಟಗಾರಿಕೆ ಬೆಳೆಗಳಿಗೆ ಔಷದಿ ಸಿಂಪಡಣೆಯನ್ನು ಮಾಡುವಾಗ ಜಾಗ್ರತೆ ವಹಿಸಿ
ರಾಗಿ	➢ ರಾಗಿ ಬಿತ್ತನೆಯನ್ನು ಇನ್ನು 2 ವಾರಗಳ ಕಾಲ ಮುಂದೂಡುವುದು ಸೂಕ್ತ.
ಮೆಕ್ಕೆಜೋಳ	➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು. ➢ ಬಿತ್ತಿದ 25-30 ದಿನಗಳ ಬೆಳೆಯಲ್ಲಿ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು ಮತ್ತು ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ತೇವಾಂಶ ಸಿಗುವಂತಾಗುತ್ತದೆ. ➢ ಕಾಂಡಕೊರಕದ ಹುಳುವಿನ ಹತೋಟಿಗೆ ಕ್ವಿನಾಲ್‌ಫಾಸ್-25 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ಅಥವಾ ಕ್ಲೋರೋಪೈರಿಫಾಸ್-20 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.
ತೊಗರಿ	➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ

	ಹೊದಿಕೆ ಮಾಡಬೇಕು. ➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು . ➢ ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವುದರಿಂದ ಮಣ್ಣಿನ ತೇವಾಂಶದ ಸದ್ಬಳಕೆ ಮಾಡಿಕೊಳ್ಳಬಹುದು. ➢ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ-ಹೊದಿಕೆಯಾಗಿ ಹರಡುವುದು.
ಶೇಂಗಾ/ನೆಲಗಡಲೆ	➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು.
ಅಲಸಂದೆ ಮತ್ತು ಅವರೆ	➢ ಅಲಸಂದೆ ಬೆಳೆಯಲ್ಲಿ ಸಿ-152 ಮತ್ತು ಕೆ.ಎಮ್-5, ಟಿ.ವಿ.ಎಕ್ಸ್-944. ಅಥವಾ ತರಕಾರಿಗಾಗಿ ಪಿ.ಕೆ.ಬಿ-4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ➢ ಅವರೆ: ಎಚ್.ಎ-3 ಮತ್ತು 4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
ಜಾನುವಾರು	
ಸಾಮಾನ್ಯ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
ಹೈನುಗಾರಿಕೆ	➢ ಜಂತು ಹುಳುಗಳ ನಿವರಣೆಗಾಗಿ ಪಶುವೈದ್ಯರ ಸಲಹೆ ಪಡೆದು ಸೂಕ್ತವಾದ ಜಂತು ನಿವಾರಕ ಔಷದಿಯನ್ನು ಕರು ಹುಟ್ಟಿದ 7ನೆಯ ದಿನ, 1 ನೆಯ ತಿಂಗಳು , 6 ನೆಯ ತಿಂಗಳು ತಪ್ಪದೆ ಹಾಕಬೇಕು. ➢ ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೋಡಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು